ಬೀದರ್ ಜಿಲ್ಲೆಯಲ್ಲಿ ಡಿ.ಡಿ.ಇ.ಪಿ. ಯೋಜನೆಯಡಿ ಶಾಲಾಕೊಠಡಿಗಳ ನಿರ್ಮಾಣ

1252 (1400) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಡಿ.ಪಿ.ಇ.ಪಿ. ಕಾರ್ಯಕ್ರಮದಡಿ ಎಷ್ಟು ಶಾಲಾ ಕೊಠಡಿಗಳನ್ನು ಕಟ್ಟಲು ನಿರ್ಧರಿಸಲಾಗಿತ್ತು? (ವಿವರ ನೀಡುವುದು)

ಆ) ಈ ಯೋಜನೆಯಡಿ ಇದುವರೆವಿಗೂ ಕಟ್ಟಿರುವ ಶಾಲಾ ಕೊಠಡಿಗಳೆಷ್ಟು (ಕ್ಷೇತ್ರವಾರು ವಿವರ ಒದಗಿಸುವುದು)

ಇ) ಅನೇಕ ಶಾಲಾ ಕೊಠಡಿಗಳು ಅಪೂರ್ಣವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಾರಣಗಳೇನು? ಹಾಗೂ ಅವುಗಳನ್ನು ಪೂರ್ಣಗೊಳಿಸಲು ಕೈಗೊಂಡ ಕ್ರಮಗಳೇನು?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಅ) ಬೀದರ್ ಜಿಲ್ಲೆಯಲ್ಲಿ 139 ಶಾಲಾ ಕಟ್ಟಡಗಳು ಡಿ.ಪಿ.ಇ.ಪಿ. ಯೋಜನೆಯಡಿ ಮಂಜೂರಾಗಿದ್ದು ಅವುಗಳಲ್ಲಿ

(ಅ) ಹೊಸಶಾಲಾ ಕಟ್ಟಡಗಳು - 59

(ಆ) ಹೆಚ್ಚುವರಿ ಕೊಠಡಿಗಳು - 80

ಆ) ಇದುವರೆವಿಗೂ 117 ಶಾಲಾ ಕೊಠಡಿಗಳು ಪೂರ್ಣಗೊಂಡಿರುತ್ತದೆ. ಪೂರ್ಣಗೊಂಡ ಕಟ್ಟಡಗಳ ಕ್ಷೇತ್ರವಾರು ವಿವರ ಈ ಕೆಳಗಿನಂತಿದೆ.

ಔರಾದ	ಬೀದರ್	ಬಾಲ್ಕಿ	ಬಸವ ಕಲ್ಯಾಣ	ಹುಮನಾಬಾದ್	ಹುಲಸೂರ ಕ್ಷೇತ್ರ
43	24	16	09	16	09

ಇ) ಹೌದು

ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯನ್ನು ನಿರೀಕ್ಷಿಸಿದೆ. ಹಣ ಬಿಡುಗಡೆಯಾದ ನಂತರ ಬಾಕಿ ಇರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮತ್ತು 3 ತಿಂಗಳಲ್ಲಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬೆಂಗಳೂರಿನಲ್ಲಿ ಶಿಕ್ಷಕರ ಸದನದ ನಿರ್ಮಾಣ

1253 (1565) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಧಾನಿ ಬೆಂಗಳೂರಿನಲ್ಲಿ ಬಹು ದೊಡ್ಡದಾದ ಶಿಕ್ಷಕರ ಸದನವನ್ನು ಕಟ್ಟಿಸುವ ಕಾರ್ಯಕ್ರಮವಿದೆಯೇ; ಹಾಗಿದ್ದಲ್ಲಿ ಅದರ ಅಂದಾಜು ಇತ್ಯಾದಿಗಳ ವಿವರ ನೀಡುವುದು;

ಆ) ಹಾಗಿದ್ದಲ್ಲಿ, ಈ ಸದನವನ್ನು ಶಿಕ್ಷಕರ ಕಡ್ಡಾಯದ ಒಂದು ದಿನದ ಸಂಬಳ ಕಡಿತದಿಂದ ಕಟ್ಟಿಸಬೇಕೆಂದಿರುವ ಮಾಹಿತಿ ನಿಜವೇ;

ಇ) ಶಿಕ್ಷಕ ಸಮುದಾಯ ಸರ್ಕಾರದ ಈ ಕಡ್ಡಾಯದ ಕಡಿತಕ್ಕೆ ವಿರೋಧ ಮಾಡುವುದರ ಜೊತೆಗೆ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಒಂದೊಂದು ಶಿಕ್ಷಕರ ಸದನ ಆಗಬೇಕೆಂದು ಒತ್ತಾಯಿಸುತ್ತಿರುವುದು ನಿಜವೇ;